ಅ) ಹೌದು.

ಇ) ಕರ್ನಾಟಕ ರಾಜ್ಯ ವಿಶೇಷ ಪತ್ರದಲ್ಲಿ ಆಜ್ಞಾಪತ್ರವು ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಖಾಸಗಿ ಬಸ್ಸುಗಳ ಪರವಾನಿಗೆ

898 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಿಗೆ ಇಲಾಖೆಯಿಂದ ಪರವಾನಿಗೆ ಪಡೆದ ಖಾಸಗಿ ಬಸ್ಸು ರೂಟುಗಳು ಎಷ್ಟು?

ಆ) ಆ ಪೈಕಿ ದಕ್ಷಿಣ ಕನ್ನಡದಲ್ಲಿರುವವು ಎಷ್ಟು?

ಇ) ಪರವಾನಿಗೆ ಪಡೆದು ಬಸ್ಸು ಓಡಿಸದೇ ಇರುವ ರೂಟುಗಳ ಸಂಖ್ಯೆ ಎಷ್ಟು?

ಈ) ಅಂತಹವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೆ; ಅಥವಾ ಅಂತಹವರ ಪರವಾನಿಗೆ ರದ್ದು ಮಾಡುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) 5200

ಆ) 1413 ಅ) ಒಳ ರಾಜ್ಯ : 1281

ಆ) ಅಂತರ ರಾಜ್ಯ : 132

ಇ) 602

ಈ) ಹೌದು. ಮೋಟಾರು ವಾಹನ ಕಾಯ್ದೆ ಮತ್ತು ನಿಯಮದಡಿಯಲ್ಲಿ ಕ್ರಮ ತೆಗೆದುಕೊಂಡು 259 ಪರವಾನಿಗೆಗಳನ್ನು ರದ್ದುಪಡಿಸಲಾಗಿದೆ.

ದೇವಸ್ಥಾನಗಳಿಗೆ ಸಹಾಯ ಧನ

899 - ಡಾ: ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಜರಾಯಿ ಇಲಾಖೆಯಿಂದ ಸಹಾಯ ಧನ ಕೊಟ್ಟ ಬಗ್ಗೆ ಜಿಲ್ಲಾವಾರು ಮಾಹಿತಿ ಕೊಡುವಿರಾ?

ಆ) ಉತ್ತರ ಕನ್ನಡ ಜಿಲ್ಲೆಗೆ ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಸಹಾಯ ಧನ ಕೊಡುವಿರಿ?

ಇ) ಈ ಸಹಾಯ ಧನ ಕೊಡುವುದಕ್ಕೆ ಮಾರ್ಗ ಸೂಚಿ ಇದೆಯೇ?